**ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

ಸಿಸಿ ನಂ. 762/2023

ಪ್ರಾಸಾ : 03

ಚಾಸಾ : 03

| | | |
|---|---|---|
| ಹೆಸರು | : | ಕೃಷ್ಣಪ್ಪ ಪೂಜಾರಿ |
| ತಂದೆಯ ಹೆಸರು | : | ನಾರಾಯಣ ಪೂಜಾರಿ |
| ಪ್ರಾಯ | : | 56 ವರ್ಷ |
| ಉದ್ಯೋಗ | : | ಟೈಲರ್ |
| ವಾಸಸ್ಥಳ | : | ಬಂಟ್ವಾಳ ತಾಲೂಕು |

ದಿಃ **09.07.2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಶೋಧನಾ ಕಾರ್ಯ ಜರುಗಿಸಿದ ಬಗ್ಗೆ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಮಹಜರು ಆಗಿದ್ದು, ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು.

2. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಪಂಚಾಯತಿ ದಾರರಿಗೆ

ನೀಡುವ ನೊಟೀಸು ಆಗಿದ್ದು, ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–3(ಸಿ) ಎಂದು ಗುರುತಿಸಲಾಯಿತು. ನಿ.ಪಿ. 1 ರಿಂದ 3 ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಯಾವಾಗ ಎಂದು ನನಗೆ ನೆನಪಿಲ್ಲ. ನಿ.ಪಿ. 1 ರಿಂದ 3 ದಾಖಲೆಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಶೋದನಾ ಕಾರ್ಯ ನಡೆಸಿರುವುದಿಲ್ಲ ಹಾಗೂ ಮಹಜರು ಕ್ರಮ ಜರುಗಿಸಿರುವುದಿಲ್ಲ ಹಾಗೂ ಯಾವುಂದೆ ಮು.ಮಾ. ಗಳನ್ನು ವಶಕ್ಕೆ ಪಡೆದದಿರುವುದಿಲ್ಲ. ಪೊಲೀಸರು ನನಗೆ ಯಾವುದೇ ನೋಟೀಸು ಕೊಟ್ಟಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕಜೊಟ್ಟಿರುವುದಿಲ್ಲ. ಆರೋಪಿತರನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಎಪಿಪಿಯವರಿಂದಃ –

2. ದಿಃ 12–03–2023 ರಂದು ಆರೋಪಿತರು ಯಾವುದೆ ಪರವಾನಗಿ ಇಲ್ಲದೇ ಕುಕ್ಕಾಜೆ ಎಂದು ಸಾರ್ವಜನಿಕ ಸ್ಥಳದಲ್ಲಿ ಹೆಚ್ಚಿನ ಲಾಭ ಗಳಿಸುವ ಉದ್ದೇಶದಿಂದ ಸಾರ್ವಜನಿಕರಿಗೆ 1 ನೇ ಆರೋಪಿ ಕೆಎ–19–ಎಎ–3440 ಆಟೋ ರಿಕ್ಷಾದಲ್ಲಿ ಮದ್ಯಾದ ಬಾಟಲಿಗಳನ್ನು ತುಂಬಿಸಿಕೂೀಂಡು ಕುಕ್ಕಾಜೆ ಕಡೆಗೆ ಸಾಗಾಟ ಮಾಡುತ್ತಿದ್ದು, ಮದ್ಯಾಹ್ನ 1 ಗಂಟೆಯ ಸಮಯದಲ್ಲಿ ಮಾಣಿಲ ಗ್ರಾಮದ ಪೆರುವಾಯಿ ಸೊಸೈಟಿ ಬಳಿ ಚಾಸಾ 1 ರವರು ನನ್ನಮತ್ತು ಚಾಸಾ3 ರವರ ಸಮಕ್ಷಮ ಮತ್ತು ಸಿಬ್ಬಂದಿಗಳಾದ ಚಾಸಾ 4 ರಿಂದ 6 ರವರ ಸಮಕ್ಷಮ ಪತ್ತೆ ಹಚ್ಚಿ ಕೊಟ್ಟು 8.640 ಲೀಟರ್ ಮದ್ಯವನ್ನು ಸ್ವಾದೀನಪಡಿಸಿಕೊಂಡಿದ್ದು, ಅದರ ಮೌಲ್ಯ 3,360 ಆಗಿದ್ದು, ಸದರಿ ಆಟೋ ವನ್ನು ಸಹ ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅದೇ ದಿನ ನನ್ನ ಸಮಕ್ಷಮ ನಿ.ಪಿ. 1 ರಂತೆ ಶೋಧನಾ ಕಾರ್ಯ ಜರುಗಿಸಿ ನಿ.ಪಿ. 2 ರಂತೆ ಮಹಜರು ಜರುಗಿಸಿ ಮಧ್ಯದ ಬಾಟಲಿಗಳನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಮಹಜರು ಕಾಲದಲಿ ಪೊಲೀಸರು ನಿ.ಪಿ. 3 ರಂತೆ ನನಗೆ ನೋಟೀಸು

ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಾನು ನಿ.ಪಿ. 1 ರಿಂದ 3 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ, ಈ ಸಂಬಂದ ನಾನು ದಿನಾಂಕ 12-03-2023 ರಂದು ಪೊಲೀಸರಿಗೆ ನಾನು ಈ ಮೇಲಿನ ವಿಳಾಸದಲ್ಲಿ ಸಂಸಾರದೊಂದಿಗೆ ವಾಸವಾಗಿದ್ದು

..........................................................................................................

..ಆರೋಪಿ ಶ್ರೀಧರ ನನ್ನು ಮತ್ತು ಸ್ವತ್ತುಗಳನ್ನು ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ಸಂಪೂರ್ಣ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿಯು ಅವುಗಳನ್ನು ಅಲ್ಲಗಳೆದಿರುತ್ತಾರೆ. ಸಾಕ್ಷಿಯು ಅಲ್ಲಗಳೆದ ಭಾಗವನ್ನು ನಿ.ಪಿ. 8 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರಃ ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ